ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಜೆ ಎಮ್ ಎಫ್ ಸಿ , ಕುಂದಗೋಳ

ಓ ಎಸ್ ನಂಬರ **11/2019** ಡಿ ಡಬ್ಲ್ಯೂ **7**

ಸಾಕ್ಷಿಯ ಹೆಸರು ಃ ವಿಜಯಕುಮಾರ ಫಡೋಸಿ

ತಂದೆಯ ಹೆಸರು ಃ ಶ್ರೀಧರ

ವಯಸ್ಸು ಃ 50 ವರ್ಷ

ಉದ್ಯೋಗ ಃ ಬಾಂಡ್ ರೈಟರ್.

ವಾಸಸ್ಥಳ ಃ ಕುಂದಗೋಳ.

ದಿನಾಂಕಃ 02/02/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ ಸಿ ಎಮ್ ಕೆ ವಕೀಲರಿಂದ ಃ

1. ನಾನು ಸುಮಾರು 15-20 ವರ್ಷಗಳಿಂದ ಬಾಂಡ್ ರೈಟರ್ ಕೆಲಸವನ್ನು ಕುಂದಗೋಳದಲ್ಲಿ ಮಾಡುತ್ತಿದ್ದೇನೆ. ನನ್ನ ಬಳಿ ಪರವಾನಗಿ ಸಹ ಇದೆ. ಸಾಕ್ಷಿ ನಿಡಿ. 1 ರಲ್ಲಿ ತನ್ನ ಸೀಲ್ ಮತ್ತು ಸಹಿ ಇದೆ. ಸದರಿ ಸಹಿಯನ್ನು ನಿಡಿ. 1 ಬಿ ಎಂದು ಗುರುತಿಸಲಾಯಿತು. ಸದರಿ ದಾಖಲೆಯನ್ನು ನಾನೇ ದಸ್ತು ಮಾಡಿಸಿರುತ್ತೇನೆ. ನಿಡಿ. 1 ರಲ್ಲಿರುವ ಎಡಗೈ ಹೆಬ್ಬೆಟ್ಟು ಗುರುತಿಗೆ ನಾನು ದಸ್ತುರು ಎಂದು ಚಿಕ್ಕ ಸಹಿ ಮಾಡಿರುತ್ತೇನೆ. ನನ್ನ ತಂದೆ ಶ್ರೀಧರ ತಂದೆ ಗುರುನಾಥ ಫಡೋಸಿ ಕುಂದಗೋಳದಲ್ಲಿ ಪರವಾನಗಿ ಹೊಂದಿದ ದಸ್ತು ಬರಹಗಾರರು ಎಂದು ಕಾರ್ಯ ಮಾಡುತ್ತಿದ್ದರು. ಅವರು 10 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ. ಸಾಕ್ಷಿ ನಿಡಿ. 3 ರಲ್ಲಿ ತನ್ನ ತಂದೆಯ ಸೀಲ್ ಮತ್ತು ಸಹಿ ಇರುತ್ತದೆ. ಸದರಿ ಸಹಿಯನ್ನು ತಕರಾರಿಗೆ ಒಳಪಟ್ಟು ನಿಡಿ. 3 ಡಿ ಎಂದು ಗುರುತಿಸಲಾಯಿತು. ನನ್ನ ತಂದೆ ಜೀವಂತವಿದ್ದಾಗ ನಾನು ಅವರ ಜೊತೆಗೆ ದಸ್ತು ಬರಹಗಾರನಾಗಿ ಕೆಲಸ ಮಾಡಿದ್ದೇನೆ. ಅವರು ನನ್ನ ಸಮಕ್ಷಮ ಸಹಿಗಳನ್ನು ಮಾಡಿದ್ದಾರೆ.

ಪಾಟೀ ಸವಾಲು ಃ ವಾದಿ ಪರ ಶ್ರೀ ಎಮ್ ಬಿ ಬಿ ವಕೀಲರಿಂದ ಃ

**2.** ಪರವಾನಗಿ ಪಡೆದ ತಾರೀಖು, ತಿಂಗಳು ಮತ್ತು ವರ್ಷ ನನಗೆ ಹೇಳಲಾಗುವುದಿಲ್ಲ. ಆದರೆ 1999-2000 ದಲ್ಲಿ ಎಂದು ಹೇಳುತ್ತಾರೆ. ಪ್ರತಿ ವರ್ಷ ಪರವಾನಗಿಯನ್ನು ನವೀಕರಣ ಮಾಡುಲಾಗುತ್ತದೆ ಎಂದರೆ ಸರಿ. ಆ ಸಂಬಂಧ ದಾಖಲೆಯನ್ನು ಹಾಜರು ಪಡಿಸುತ್ತೀರಾ ಎಂದರೆ ಇಲ್ಲ. ಪರವಾನಗಿಯನ್ನು ನಾನು ನವೀಕರಣ ಮಾಡಿಸಿಲ್ಲ ಎಂದರೆ ಸರಿಯಲ್ಲ. ಮಾಡಿಸಿದ್ದೇನೆ. ಪರವಾನಗಿ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿದೆ. ಹಾಜರು ಪಡಿಸುತ್ತೇನೆ. ಯಾವುದೇ ಕಾಗದ

ಬರೆದರೂ ನಮ್ಮ ರಜಿಸ್ಟರನಲ್ಲಿ ನಮೂದು ಮಾಡುತ್ತೇವೆ ಎಂದರೆ ಸರಿ. ನಿಡಿ. 1 ನ್ನು ಸದರಿ ರಜಿಸ್ಟರನಲ್ಲಿ ನಮೂದಿಸಿದ್ದೀರಾ ಎಂದರೆ ಇಲ್ಲ. ನನಗೆ ಕಂಪ್ಯೂಟರನಲ್ಲಿ ಬೆರಳಚ್ಚು ಮಾಡಲು ಬರುವುದಿಲ್ಲ. ನಿಡಿ. 1 ನ್ನು ಬೆರಳಚ್ಚು ಮಾಡಿದವರ ಹೆಸರು ಹಾಗೂ ಸಹಿ ಇಲ್ಲ ಎಂದರೆ ಸರಿ. ನಿಡಿ. 1 ನ್ನು ಯಾವ ತಾರೀಖು ಮತ್ತು ತಿಂಗಳು ತಯಾರು ಮಾಡಿದ್ದೀರಾ ಎಂದು ನನಗೆ ಹೇಳಲಾಗುವುದಿಲ್ಲ. ಸಾಕ್ಷಿ ನುಡಿಯಲು ನನಗೆ ನ್ಯಾಯಾಲಯದಿಂದ ನನಗೆ ಸಮನ್ಸ ಬಂದಿತ್ತು. ಆ ನಂತರ ನ್ಯಾಯಾಲಯಕ್ಕೆ ಬಂದು ಯಾವ ಪ್ರಕರಣಕ್ಕೆ ಸಂಬಂಧಿಸಿದ್ದೆಂದು ಕಡತ ತೆಗೆಸಿ ಪರೀಶೀಲನೆ ಮಾಡಿದ್ದೀರಾ ಎಂದರೆ ಇಲ್ಲ. ಈ ದಾವೆಯನ್ನು ಯಾರು ಯಾರ ಮೇಲೆ ಹಾಕಿದ್ದಾರೆ ಎಂದು ನನಗೆ ಸ್ವಂತಕ್ಕೆ ಗೊತ್ತಿಲ್ಲ. ನಿಡಿ. 1 ನ್ನು ಯಾರು ಯಾರ ಹೆಸರಿನಲ್ಲಿ ಬರೆದರು ಎಂದು ನನಗೆ ಹೇಳಲಾಗುವುದಿಲ್ಲ. ಕಾಗದದಲ್ಲಿ ಏನು ಸಂಗತಿ ಬರೆದಿದೆ ಎಂದು ನನಗೆ ಹೇಳಲಾಗುವುದಿಲ್ಲ ಎಂದರೆ ಸರಿ. ನಿಡಿ. 1 ನ್ನು ತಯಾರು ಮಾಡಲು ನನಗೆ ಯಾರು ನನಗೆ ಮಾಹಿತಿ ಕೊಟ್ಟಿಲ್ಲ ಹಾಗೂ ನಾನು ಬೆರಳಚ್ಚು ಮಾಡಿಸಿಲ್ಲ ಎಂದರೆ ಸರಿಯಲ್ಲ. ಸಂಗಪ್ಪ ತಯಾರು ಮಾಡಿಸಿ ತಂದ ಪತ್ರಕ್ಕೆ ನಾನು ಸೀಲ ಮತ್ತು ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ. ನಾನು ಹೆಬ್ಬೆಟ್ಟನ್ನು ಗುರುತಿಸಿ ಚಿಕ್ಕ ಸಹಿ ಹಾಕಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2020 ನೇ ಇಸ್ವೀಯಲ್ಲಿ ನನ್ನ ಪರವಾನಗಿ ನವೀಕರಿಸಿರಲಿಲ್ಲ ಹಾಗೂ ಪತ್ರ ಬರೆಯುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ.

3. ನನ್ನ ತಂದೆ ಸಹ ಕಂಪ್ಯೂಟರನಲ್ಲಿ ಬೆರಳಚ್ಚು ಮಾಡುತ್ತಿರಲಿಲ್ಲ ಎಂದರೆ ಸರಿ. ನಿಡಿ. 3 ರಲ್ಲಿ ಯಾರು ಬೆರಳಚ್ಚು ಮಾಡಿದ್ದಾರೆ ಹಾಗೂ ಅವರ ಹೆಸರು ಹಾಗೂ ಸಹಿ ಇಲ್ಲ ಎಂದರೆ ಸರಿ. ಕಾಗದ ತಯಾರಿಸಿದವರು ತಮ್ಮ ಹೆಸರು ಬರೆದು ಸೀಲ ಮತ್ತು ಸಹಿ ಮಾಡಿ ಕೊಡುತ್ತಾರೆ ಎಂದರೆ ಸರಿ. ನಿಡಿ. 3 ರಲ್ಲಿ ಏನು ಬರೆದಿದೆ ಯಾರು ಯಾರಿಗೆ ಬರೆದು ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ತಂದೆಯವರು ಯಾವುದೇ ಕಾಗದ ಬರೆದರೂ ರಜಿಸ್ಟರನಲ್ಲಿ ಬರೆದು ಅವರ ಸಹಿ ಪಡೆಯುತ್ತಿದ್ದರು ಎಂದರೆ ಸರಿ. ಸದರಿ ರಜಿಸ್ಟರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ. ನಿಡಿ. 3 ರ ಬಗ್ಗೆ ಯಾವುದೇ ರಜಿಸ್ಟರ ನಮ್ಮ ಮನೆಯಲ್ಲಿ ಇಲ್ಲ ಎಂದರೆ ಸರಿ. ನಿಡಿ. 1 ಮತ್ತು 3 ನ್ನು ನಾನು ಹಾಗೂ ನನ್ನ ತಂದೆ ತಯಾರು ಮಾಡಿಲ್ಲ, ಸೀಲ ಮತ್ತು ಸಹಿ ಹಾಕಿದ್ದನ್ನು ಬಿಟ್ಟರೇ ನನಗೆ ಏನು ಗೊತ್ತಿಲ್ಲ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ. 3 ಡಿ ಸಹಿ ನನ್ನ ತಂದೆಯದು ಎಂದು ತೋರಿಸಲು ಬೇರೆ ದಾಖಲೆ ಹಾಜರು ಪಡಿಸಿದ್ದೀರಾ ಎಂದರೆ ಇಲ್ಲ.

<u>ಪಾಟೀ ಸವಾಲು ಃ **7 ಎ, 8** ಮತ್ತು **9** ನೇ ಪ್ರತಿವಾದಿಗಳ ಪರ ವಕೀಲರು ಈ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಡಿರುತ್ತಾರೆ**.**</u>

<u>ಮರು ವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಕ್ತುಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ.